









ಕಾರ್ನಿವಲ್ ನಡೆಯಲಿದೆ. ಈ ಕಾರ್ನಿವಲ್‌ಗಾಗಿ, ಅದರಲ್ಲಿನ ಗ್ರ್ಯಾಂಡ್ ಚಾಂಪಿಯನ್ ಸ್ಥಾನಕ್ಕಾಗಿ ರಿಯೊ ನಗರದ ಹಲವಾರು ಸಾಂಬಾ ಶಾಲೆಗಳು ವರ್ಷಪೂರ್ತಿ ತಯಾರಿ ನಡೆಸುತ್ತವೆ.

## ಮರೆಯಲಿ ಹ್ಯಾಂಗ...

ಕಳೆದ ವರ್ಷ 2024ರ ಫೆಬ್ರುವರಿ 9ರಿಂದ 14ರವರೆಗೆ ಬ್ರೆಜಿಲ್‌ನ ರಿಯೊ ನಗರದಲ್ಲಿ ಕಾರ್ನಿವಲ್ ಆಯೋಜಿಸಲಾಗಿತ್ತು. ಶುಕ್ರವಾರ ಮಧ್ಯಾಹ್ನದಿಂದ ಬುಧವಾರ (ಆಶ್ ಬುಧವಾರ) ಮಧ್ಯಾಹ್ನದವರೆಗೂ ನಡೆಯಿತು. ಕ್ಯಾಥೊಲಿಕ್ ಪಂಗಡದವರ ಲೆಂಟ್ ಎಂಬ ವ್ರತಾಚರಣೆಯ ಹಬ್ಬದ ಪ್ರಾರಂಭವನ್ನು ಇದು ಪ್ರತಿನಿಧಿಸುತ್ತದೆ. ಲ್ಯಾಟಿನ್ ಪದ ಕಾರ್ನೆ ವಾಲೆ ಅಂದರೆ 'ಮಾಂಸ ತಿನ್ನದಿರುವುದು' ಎಂದರ್ಥ.

1500ನೇ ಇಸವಿಯಲ್ಲಿ ಪೋರ್ಚುಗೀಸರು ಬ್ರೆಜಿಲ್‌ಗೆ ಈ ಆಚರಣೆಯನ್ನು ತಂದರು ಎನ್ನುತ್ತಾರೆ. ನಂತರ ಮೂಲನಿವಾಸಿಗಳ, ಆಫ್ರಿಕನ್ನರ ಲಯ, ನೃತ್ಯ, ವೇಷಭೂಷಣಗಳು ಸಂಕರಣಗೊಂಡು ವಿಶೇಷ ಸೊಗಡನ್ನು ಹೊಂದುವ ಮೂಲಕ ಅದು ಲೋಕಖ್ಯಾತಿ ಹೊಂದಿತು.

ಬ್ರೆಜಿಲಿನಲ್ಲಿ ಈ ಆರು ದಿನಗಳು ಅಘೋಷಿತ ರಜಾ ದಿನಗಳಿದ್ದಂತೆ. ಇಡೀ ದೇಶದಲ್ಲಿ, ಎಲ್ಲಾ ವ್ಯವಸ್ಥೆಗಳೂ ಸ್ಥಗಿತವಾಗುತ್ತವೆ. ಯಾರೂ ಯಾವ ಕೆಲಸವನ್ನೂ ಮಾಡುವುದಿಲ್ಲ. ಎಲ್ಲರೂ ಮೈಮರೆತು ರಸ್ತೆಯಲ್ಲಿ ತುಂಡು ಬಟ್ಟೆಯುಟ್ಟು ಸಂಭ್ರಮಿಸುತ್ತಿರುತ್ತಾರೆ. ಈ ಸಂಭ್ರಮದಲ್ಲಿ ಪಾಲ್ಗೊಳ್ಳಲು ಲಕ್ಷಾಂತರ ಮಂದಿ ಪ್ರವಾಸಿಗರು ಆಗಮಿಸುವರು.

ಬ್ರೆಜಿಲ್ ಸಂಸ್ಕೃತಿಯನ್ನು ಆಸ್ವಾದಿಸುವ ಏಕೈಕ ರಹದಾರಿ ಈ ಕಾರ್ನಿವಲ್. ಬ್ರೆಜಿಲಿನ ಹಲವಾರು ನಗರಗಳಲ್ಲಿ ಕಾರ್ನಿವಲ್ ನಡೆಯುತ್ತದೆಯಾದರೂ ಅತಿ ದೊಡ್ಡದಾದ ಕಾರ್ನಿವಲ್ ಆಚರಣೆ ನಡೆಯುವುದು ರಿಯೊ ಡಿ ಜನ್ರೈರೊದಲ್ಲಿ.